# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 29 |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಠೋಡ (ನಾಮ ನಿರ್ದೇಶನ ಹೊಂದಿರುವವರು) |
| ಉತ್ತರಿಸಬೇಕಾದ ದಿನಾಂಕ | : | 12.09.2022 |
| ಉತ್ತರಿಸುವ ಸಚಿವರು | : | ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಸ್ವಾಮ್ಯದಲ್ಲಿರುವ ಸಾಂಸ್ಕೃತಿಕ ಹಾಗೂ ಸಾಹಿತ್ಯಗಳ ಟ್ರಸ್ಟ್‌ಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 23 ಟ್ರಸ್ಟ್‌ಗಳು ಇದ್ದು, ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಲಾಗಿದೆ. |
| ಆ | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿರುವ ಸಾಂಸ್ಕೃತಿಕ ಮತ್ತು ಸಾಹಿತ್ಯ ಟ್ರಸ್ಟ್‌ಗಳಲ್ಲಿ ಪದಾಧಿಕಾರಿಗಳ ನೇಮಕ ಮಾಡಿ, ನಂತರ ಆದೇಶವನ್ನು ವಾಪಸ್ಸು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮಾಹಿತಿ ಒದಗಿಸುವುದು; | ಹೌದು.<br><br>ಹೊರಡಿಸಿದ ಆದೇಶದಲ್ಲಿ ಕೆಲವೊಂದು ಹೆಸರುಗಳನ್ನು ಮಾರ್ಪಡಿಸಬೇಕಾಗಿದ್ದರಿಂದ ಆದೇಶವನ್ನು ಹಿಂಪಡೆಯಲಾಗಿದೆ. |
| ಇ | ಈ ಸಂಸ್ಥೆಗಳಿಗೆ ಪದಾಧಿಕಾರಿಗಳನ್ನು ನೇಮಕ ಮಾಡಲು ಇರುವ ನಿಯಮಗಳೇನು; ಆಗಿರುವ ಅಡೆತಡೆಗಳೇನು? (ಸಂಪೂರ್ಣ ವಿವರ ನೀಡುವುದು). | ನಿಯಮಗಳನ್ನು ಅನುಬಂಧ-2ರಲ್ಲಿ ಒದಗಿಸ ಲಾಗಿದೆ.<br><br>ಸದರಿ ಟ್ರಸ್ಟ್‌ಗಳಿಗೆ ಪದಾಧಿಕಾರಿಗಳನ್ನು ನೇಮಕ ಮಾಡಲು ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ಕಸಂವಾ 61 ಕವಿಸ 2022

**(ವಿ. ಸುನಿಲ್ ಕುಮಾರ್)**
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

## ಅನುಬಂಧ-1

### ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಟ್ರಸ್ಟ್/ಪ್ರತಿಷ್ಠಾನಗಳ ವಿವರ

| ಕ್ರಸಂ | ಟ್ರಸ್ಟ್/ಪ್ರತಿಷ್ಠಾನಗಳು |
|---|---|
| 1 | ಮಲ್ಲಿಕಾರ್ಜುನ ಮನ್ಸೂರು ಟ್ರಸ್ಟ್, ಧಾರವಾಡ |
| 2 | ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ |
| 3 | ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ |
| 4 | ಆಲೂರು ವೆಂಕಟರಾವ್ ಟ್ರಸ್ಟ್, ಧಾರವಾಡ |
| 5 | ಡಾ. ಬಸವರಾಜ ರಾಜಗುರು ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ |
| 6 | ಡಾ. ವಿ.ಕೃ ಗೋಕಾಕ ಪ್ರತಿಷ್ಠಾನ, ಹಾವೇರಿ |
| 7 | ಮೈಲಾರ ಮಹಾದೇವ ಟ್ರಸ್ಟ್, ಹಾವೇರಿ |
| 8 | ಗಳಗನಾಥರ ಪ್ರತಿಷ್ಠಾನ, ಹಾವೇರಿ |
| 9 | ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ |
| 10 | ಬಸವರಾಜ ಕಟ್ಟೀಮನಿ ಪ್ರತಿಷ್ಠಾನ,ಬೆಳಗಾವಿ |
| 11 | ರನ್ನ ಪ್ರತಿಷ್ಠಾನ, ಮುಧೋಳ, ಬಾಗಲಕೋಟೆ |
| 12 | ಧುತ್ತರಗಿ ಪ್ರತಿಷ್ಠಾನ, ಬಾಗಲಕೋಟೆ |
| 13 | ಡಾ. ಪು.ತಿ.ನ ಟ್ರಸ್ಟ್, ಬೆಂಗಳೂರು |
| 14 | ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ ಪ್ರತಿಷ್ಠಾನ, ಬೆಂಗಳೂರು |
| 15 | ಡಾ. ಡಿ.ವಿ.ಜಿ. ಪ್ರತಿಷ್ಠಾನ, ಕೋಲಾರ |
| 16 | ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಕೋಲಾರ |
| 17 | ರಾಷ್ಟ್ರ ಕವಿ ಕುವೆಂಪು ಪ್ರತಿಷ್ಠಾನ, ಶಿವಮೊಗ್ಗ |
| 18 | ಶಿವರಾಮ ಕಾರಂತ ಟ್ರಸ್ಟ್, ಉಡುಪಿ |
| 19 | ಶಿವರಾಮ ಕಾರಂತ ಟ್ರಸ್ಟ್, ಪುತ್ತೂರು, ದಕ್ಷಿಣ ಕನ್ನಡ |
| 20 | ಶ್ರೀ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್, ಮಂಡ್ಯ |
| 21 | ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಚಿಕ್ಕಮಗಳೂರು |
| 22 | ಹಲಸಂಗಿ ಗೆಳೆಯರ ಬಳಗ ಟ್ರಸ್ಟ್, ವಿಜಯಪುರ |
| 23 | ಡಾ. ಗುಬ್ಬಿವೀರಣ್ಣ ಟ್ರಸ್ಟ್, ತುಮಕೂರು |

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿನ ಟ್ರಸ್ಟ್/ಪ್ರತಿಷ್ಠಾನಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಏಕ ಕಡತ ಸಂ:ಕಸನಿ ಟ್ರಸ್ಟ್/ಪ್ರತಿಷ್ಠಾನ.

ಪ್ರಸ್ತಾವನೆ:-

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಕಲೆ, ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಗಣ್ಯರ ಹೆಸರಿನಲ್ಲಿ 23 ಟ್ರಸ್ಟ್ / ಪ್ರತಿಷ್ಠಾನಗಳನ್ನು ಸ್ಥಾಪಿಸಲಾಗಿದ್ದು, ಸದರಿ ಟ್ರಸ್ಟ್/ಪ್ರತಿಷ್ಠಾನಗಳ ಧ್ಯೇಯೋದ್ದೇಶಗಳೊಂದಿಗೆ ಕಾರ್ಯಚಟುವಟಿಕೆಗಳನ್ನು ಸುಗಮವಾಗಿ ನಡೆಸಿಕೊಂಡು ಹೋಗಲು ಪ್ರತಿಯೊಂದು ಟ್ರಸ್ಟ್/ಪ್ರತಿಷ್ಠಾನಗಳನ್ನು ನೋಂದಣಿ ಮಾಡುವ ಮುನ್ನ ಸರ್ಕಾರದಿಂದ ಅಧ್ಯಕ್ಷರು/ಸದಸ್ಯರನ್ನು ನೇಮಕ ಮಾಡಿ ಆದೇಶ ಹೊರಡಿಸಲಾಗುತ್ತದೆಂದು, ಸರ್ಕಾರದ ಆದೇಶದನ್ವಯ ಸ್ಥಾಪಿಸುವ ಟ್ರಸ್ಟ್/ಪ್ರತಿಷ್ಠಾನಗಳನ್ನು ನಿಯಮಾನುಸಾರ ನೋಂದಣಿ ಮಾಡಿಸುತ್ತಿರುವುದಾಗಿ, ಆದರೆ ನೇಮಿಸಲಾದ ಅಧ್ಯಕ್ಷರು/ಸದಸ್ಯರನ್ನು ಬದಲಾವಣೆ ಮಾಡುವ ಅಥವಾ ಅವರ ಗೌರವ ಸೇವೆಯ ಕಾಲಾವಧಿಯ ಮಿತಿಯು ಇರುವುದಿಲ್ಲ. ಹೀಗಾಗಿ ಟ್ರಸ್ಟ್/ಪ್ರತಿಷ್ಠಾನಗಳಿಗೆ ಸುಮಾರು 10-15 ವರ್ಷಗಳಿಂದ ಒಂದೇ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಇರುವುದರಿಂದ ಸಹಜವಾಗಿಯೇ ಸಾರ್ವಜನಿಕರಿಂದ ಟೀಕೆ ಟಿಪ್ಪಣಿಗಳು ಬರುತ್ತಿದ್ದು, ಇದರಿಂದಾಗಿ ಸರ್ಕಾರಕ್ಕೆ ಮುಜುಗರ ಉಂಟಾಗುತ್ತಿರುವುದರಿಂದ, ಈ ಎಲ್ಲಾ ಅಂಶಗಳನ್ನು ಗಮನಿಸಿ ಟ್ರಸ್ಟ್/ಪ್ರತಿಷ್ಠಾನಗಳಿಗೆ ನೇಮಿಸಲಾದ ಅಧ್ಯಕ್ಷರು/ಸದಸ್ಯರ ಗೌರವ ಸೇವೆಯ ಕಾಲಾವಧಿಯನ್ನು 3 ವರ್ಷ ಅಥವಾ ಮುಂದಿನ ಆದೇಶದವರೆಗೆ ನಿಗದಿಗೊಳಿಸಿ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರದ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಏಕ ಕಡತದಲ್ಲಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 517 ಕಸಧ 2017, ಬೆಂಗಳೂರು, ದಿನಾಂಕ:12-02-2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಸ್ಥಾಪಿತವಾಗಿರುವ ಅನುಬಂಧ-1ರಲ್ಲಿನ 23 ಟ್ರಸ್ಟ್/ಪ್ರತಿಷ್ಠಾನಗಳಿಗೆ ಅಧ್ಯಕ್ಷರು/ಸದಸ್ಯರುಗಳನ್ನು ನೇಮಕ ಮಾಡಲು ಅನುಬಂಧ-2ರಲ್ಲಿನಂತೆ ಮಾರ್ಗಸೂಚಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರಚಿಸಿ ಆದೇಶಿಸಿದೆ.

ಕ.ಸಂಖ್ಯೆ 10128
ದಿನಾಂಕ 14/2/18
ಕನ್ನಡ ಭವನ
ಬೆಂಗಳೂರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
(ಪಿ.ಎಸ್. ಮಾಲತಿ) 12/2/18
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

ಇವರಿಗೆ:-

1. ಮಹಾಲೇಖಪಾಲರು (ಎ&ಇ), (ಜಿ&ಎಸ್ ಎಸ್ ಎ), (ಇ & ಆರ್ ಎಸ್ ಎ), ಕರ್ನಾಟಕ ಹೊಸಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು.
3. ಸಂಬಂಧಪಟ್ಟ ಟ್ರಸ್ಟ್ / ಪ್ರತಿಷ್ಠಾನಗಳಿಗೆ (ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಇವರ ಮುಖಾಂತರ).
4. ಕನ್ನಡ ಮತ್ತು ಸಂಸ್ಕೃತಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಖಜಾನೆ ಅಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

14 FEB 2018

ಸರ್ಕಾರದ ಆದೇಶ ಸಂಖ್ಯೆ: ಕಸಂವಾ 517 ಕಸಧ 2017, ಬೆಂಗಳೂರು, ದಿನಾಂಕ:12-02-2018ಕ್ಕೆ

## ಅನುಬಂಧ-1

### ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿನ ಟ್ರಸ್ಟ್/ಪ್ರತಿಷ್ಠಾನಗಳು

| ಕ್ರ.ಸಂ. | ಟ್ರಸ್ಟ್ / ಪ್ರತಿಷ್ಠಾನ |
|---|---|
| 1 | ಮಲ್ಲಿಕಾರ್ಜುನ ಮನ್ಸೂರು ಟ್ರಸ್ಟ್, ಧಾರವಾಡ |
| 2 | ಡಾ. ವಿ.ಕೃ.ಗೋಕಾಕ್ ಪ್ರತಿಷ್ಠಾನ, ಹಾವೇರಿ |
| 3 | ಡಾ. ಡಿ.ವಿ.ಜಿ. ಪ್ರತಿಷ್ಠಾನ, ಕೋಲಾರ |
| 4 | ಮೈಲಾರ ಮಹದೇವ ಟ್ರಸ್ಟ್, ಹಾವೇರಿ |
| 5 | ರನ್ನ ಪ್ರತಿಷ್ಠಾನ ಮುಧೋಳ, ಬಾಗಲಕೋಟೆ |
| 6 | ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಧಾರವಾಡ |
| 7 | ಅಲಸಂಗಿ ಗೆಳೆಯರ ಟ್ರಸ್ಟ್, ವಿಜಯಪುರ. |
| 8 | ಧುತ್ತರಗಿ ಪ್ರತಿಷ್ಠಾನ, ಬಾಗಲಕೋಟೆ |
| 9 | ಗಳಗನಾಥರ ಪ್ರತಿಷ್ಠಾನ, ಹಾವೇರಿ |
| 10 | ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್. ಧಾರವಾಡ |
| 11 | ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಶಿವಮೊಗ್ಗ |
| 12 | ಡಾ. ಪು.ತಿ.ನ. ಗ್ರಂಥಾಲಯ ಮತ್ತು ಸಂಶೋಧನಾ. ಕೇಂದ್ರ, ಬೆಂಗಳೂರು |
| 13 | ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಕೋಲಾರ ಜಿಲ್ಲೆ |
| 14 | ಆಲೂರು ವೆಂಕಟರಾವ್ ಟ್ರಸ್ಟ್, ಧಾರವಾಡ |
| 15 | ಡಾ. ಬಸವರಾಜ ರಾಜಗುರು ಟ್ರಸ್ಟ್, ಧಾರವಾಡ |
| 16 | ನಿಜಲಿಂಗಪ್ಪ ಟ್ರಸ್ಟ್, ಚಿತ್ರದುರ್ಗ |
| 17 | ಶ್ರೀ ಬೆಟಗೇರಿ ಕೃಷ್ಣಶರ್ಮ ಟ್ರಸ್ಟ್, ಬೆಳಗಾವಿ |
| 18 | ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ |
| 19 | ಡಾ. ಶಿವರಾಮ ಕಾರಂತ ಟ್ರಸ್ಟ್, ಉಡುಪಿ |
| 20 | ಡಾ. ಶಿವರಾಮ ಕಾರಂತ ಟ್ರಸ್ಟ್, ದಕ್ಷಿಣ ಕನ್ನಡ |
| 21 | ರಾಷ್ಟ್ರಕವಿ ಡಾ.ಜಿ.ಎಸ್.ಶಿವರುದ್ರಪ್ಪ ಪ್ರತಿಷ್ಠಾನ, ಬೆಂಗಳೂರು |
| 22 | ಡಾ. ಗುಬ್ಬಿ ವೀರಣ್ಣ ಟ್ರಸ್ಟ್, ತುಮಕೂರು |
| 23 | ಶ್ರೀ ಕೆ.ಎಸ್.ನರಸಿಂಹ ಸ್ವಾಮಿ ಟ್ರಸ್ಟ್, ಮಂಡ್ಯ |
| 24 | [illegible] ಪ್ರತಿಷ್ಠಾನ. |

12/2/18

(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)

**ಸರ್ಕಾರದ ಆದೇಶ ಸಂಖ್ಯೆ: ಕಸಂಪಾ 517 ಕಸಧ 2017, ಬೆಂಗಳೂರು, ದಿನಾಂಕ:12-02-2018ಕ್ಕೆ**

ಅನುಬಂಧ-2

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ರಚಿತವಾಗಿರುವ ಟ್ರಸ್ಟ್ / ಪ್ರತಿಷ್ಠಾನಗಳಿಗೆ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಕ ಮಾಡಲು ಮಾರ್ಗಸೂಚಿ

1. ಪ್ರತಿಯೊಂದು ಟ್ರಸ್ಟ್/ಪ್ರತಿಷ್ಠಾನದಲ್ಲಿ ಅಧ್ಯಕ್ಷರನ್ನು ಒಳಗೊಂಡಂತೆ ಕನಿಷ್ಠ ಏಳು ಮಂದಿ ಮತ್ತು ಗರಿಷ್ಠ ಒಂಬತ್ತು ಜನ ಸದಸ್ಯರುಗಳು ಇರತಕ್ಕದ್ದು.
2. ಸದರಿ ನೇಮಕಾತಿ ಸಂದರ್ಭದಲ್ಲಿ ಆಯಾ ಕ್ಷೇತ್ರಗಳಲ್ಲಿ ಅನುಭವ ಮತ್ತು ಪರಿಣಿತಿ ಇರುವ ಕ್ರಿಯಾಶೀಲರನ್ನು ಮಾತ್ರ ಅಧ್ಯಕ್ಷರನ್ನಾಗಿ ಮತ್ತು ಸದಸ್ಯರನ್ನಾಗಿ ಏಕಕಾಲಕ್ಕೆ ನೇಮಕ ಮಾಡತಕ್ಕದ್ದು.
3. ಟ್ರಸ್ಟ್/ಪ್ರತಿಷ್ಠಾನಗಳಿಗೆ ಸಮಿತಿಯನ್ನು ನೇಮಿಸುವಾಗ (1) ಅಧ್ಯಕ್ಷರು-1, (2) ಸದಸ್ಯ ಕಾರ್ಯದರ್ಶಿ-1, (3) ಸಂಬಂಧಿಕರು-1, (4) ನಿಕಟವರ್ತಿ-1, (5) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ -1, (6) ಮಹಿಳೆ-1, (7) ಸಾಮಾನ್ಯ ವರ್ಗ-1 ಇವರುಗಳನ್ನು ಒಳಗೊಂಡಿರಬೇಕು. ಟ್ರಸ್ಟ್/ಪ್ರತಿಷ್ಠಾನಗಳಿಗೆ ಅಧ್ಯಕ್ಷರು/ಸದಸ್ಯರನ್ನು ನೇಮಕ ಮಾಡುವಾಗ, ಸಂಬಂಧಿಸಿದ ಸಾಹಿತಿ/ ಕಲಾವಿದರ ಒಬ್ಬರು ಸಂಬಂಧಿಗಳು ಮತ್ತು ಅವರ ನಿಕಟವರ್ತಿ ಒಬ್ಬರನ್ನು ಸಮಿತಿಯಲ್ಲಿ ಸೇರಿಸಿಕೊಳ್ಳಬಹುದು.
4. ಟ್ರಸ್ಟ್ / ಪ್ರತಿಷ್ಠಾನಗಳ ಅಧ್ಯಕ್ಷರು / ಸದಸ್ಯರ ಅಧಿಕಾರದ ಅವಧಿಯನ್ನು ಮೂರು ವರ್ಷಗಳು ಅಥವಾ ಮುಂದಿನ ಆದೇಶದವರೆಗೆ ನಿಗದಿಗೊಳಿಸುವುದು. ಯಾವುದು ಮೊದಲೋ ಅದನ್ನು ಪಾಲಿಸತಕ್ಕದ್ದು ಮತ್ತು ನೇಮಿಸತಕ್ಕದ್ದು.
5. ಸರ್ಕಾರದಿಂದ ನೇಮಿಸಲಾದ ಸಮಿತಿಯು ಕನಿಷ್ಠ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಟ್ರಸ್ಟ್ / ಪ್ರತಿಷ್ಠಾನಗಳ ಕಾರ್ಯಚಟುವಟಿಕೆಗಳನ್ನು ರೂಪಿಸುವುದು ಹಾಗೂ ಅನುಪಾಲನೆ ಮಾಡುವುದು ಮತ್ತು ಸದಸ್ಯ ಕಾರ್ಯದರ್ಶಿಗಳು ಅವುಗಳನ್ನು ಅನುಷ್ಠಾನ ಮಾಡುವುದು.
6. ಸಮಿತಿ ಸಭೆಗೆ ಹಾಜರಾದ ಸಂದರ್ಭದಲ್ಲಿ ಅಧ್ಯಕ್ಷರು /ಅಧಿಕಾರೇತರ ಸದಸ್ಯರು ಸರ್ಕಾರದ ನಿಯಮಾವಳಿಗಳಂತೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.
7. ಟ್ರಸ್ಟ್/ಪ್ರತಿಷ್ಠಾನ ಆಡಳಿತ ವ್ಯವಹಾರ ಹಾಗೂ ಹಣಕಾಸಿಗೆ ಸಂಬಂಧಿಸಿದಂತೆ ಸದಸ್ಯ ಕಾರ್ಯದರ್ಶಿಗಳೇ ಈ ಕಾರ್ಯವನ್ನು ನಿರ್ವಹಿಸುವುದು.
8. ಟ್ರಸ್ಟ್/ಪ್ರತಿಷ್ಠಾನದ ಮೂಲ ಉದ್ದೇಶಗಳನ್ನು ಸಾಧಿಸಲು ಅನುಗುಣವಾಗಿ ಪ್ರತಿ ವರ್ಷ ಕಾರ್ಯಯೋಜನೆಯನ್ನು ವರ್ಷದ ಪ್ರಾರಂಭದಲ್ಲಿಯೇ ರೂಪಿಸಿಕೊಂಡು, ಅನುಷ್ಠಾನ ಮಾಡುವುದು.
9. ಟ್ರಸ್ಟ್/ಪ್ರತಿಷ್ಠಾನ ಹಣಕಾಸಿಗೆ ಸಂಬಂಧಿಸಿದಂತೆ ಕಡ್ಡಾಯವಾಗಿ ಲೆಕ್ಕಪರಿಶೋಧಕರಿಂದ ವಾರ್ಷಿಕ ಲೆಕ್ಕಪರಿಶೋಧನೆ ಮಾಡಿಸತಕ್ಕದ್ದು.
10. ಟ್ರಸ್ಟ್/ಪ್ರತಿಷ್ಠಾನ ದತ್ತಿ ಮತ್ತು ದಾನಗಳನ್ನು ಸ್ವೀಕರಿಸಬಹುದು. ಆದರೆ ಟ್ರಸ್ಟ್ / ಪ್ರತಿಷ್ಠಾನದ ಉದ್ದೇಶಗಳಿಗೆ ಧಕ್ಕೆ ತರುವಂತಹ ದತ್ತಿ ಅಥವಾ ದಾನಗಳನ್ನು ಸ್ವೀಕರಿಸಬಾರದು.
11. ಟ್ರಸ್ಟ್/ಪ್ರತಿಷ್ಠಾನ ಅಧ್ಯಕ್ಷರ ಹುದ್ದೆಯು ಗೌರವಯುತವಾಗಿದ್ದು, ಮಾಹೆಯಾನ ರೂ.5,000/- ಗೌರವಧನ ಪಡೆಯಲು ಅರ್ಹರಾಗಿರುತ್ತಾರೆ.
12. ಟ್ರಸ್ಟ್/ಪ್ರತಿಷ್ಠಾನಗಳು ರಾಜ್ಯದ ಹೊರಗಡೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದಾಗಿದೆ. ಕಾರ್ಯಕ್ರಮದ ಎಲ್ಲಾ ವೆಚ್ಚಗಳು ನಿಯಮಾನುಸಾರ ಸರಳ ಮತ್ತು ಪ್ರಾಸಂಗಿಕವಾಗಿರಬೇಕು.
13. ಎಲ್ಲಾ ಟ್ರಸ್ಟ್/ಪ್ರತಿಷ್ಠಾನಗಳ ಸದಸ್ಯ ಕಾರ್ಯದರ್ಶಿಯು ಸರ್ಕಾರದ ಅಧಿಕಾರಿಯಾಗಿರಬೇಕು.
14. ಎಲ್ಲಾ ಟ್ರಸ್ಟ್/ಪ್ರತಿಷ್ಠಾನಗಳು ಒಂದು ಗೌರವ ವಾರ್ಷಿಕ ಪ್ರಶಸ್ತಿಯನ್ನು ನೀಡಬಹುದು, ಪ್ರಶಸ್ತಿ ಮೊತ್ತ ನಗದು ರೂ.10,000/-ಗಳನ್ನು ಹಾಗೂ ಇತರೆ ಗೌರವಗಳನ್ನು ಒಳಗೊಂಡಿರಬೇಕು.
15. ಟ್ರಸ್ಟ್/ಪ್ರತಿಷ್ಠಾನಗಳು ನಿಯಮಾನುಸಾರ ಪ್ರಕಟಣೆಗಳನ್ನು ಹೊರತರುವುದು ಹಾಗೂ ಸಂಶೋಧನೆಗಳನ್ನು ಕೈಗೊಳ್ಳಬಹುದು.

Malathi 12/2/18
(ಪಿ.ಎಸ್. ಮಾಲತಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ, ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ.
(ಸಂಸ್ಕೃತಿ ಶಾಖೆ)